# ದೇವರಕೊಂಡಗೆ ಪಾಂಡೆ ಜೋಡಿ



‘ಅರ್ಜುನ್ ರೆಡ್ಡಿ’ ಸಿನಿಮಾದ ಮೂಲಕ ರಾತ್ರೋರಾತ್ರಿ ಸ್ಟಾರ್ ಆದ ವಿಜಯ ದೇವರಕೊಂಡ ಬಾಲಿವುಡ್ ಅಂಗಳಕ್ಕೂ ಲಗ್ಗೆ ಹಾಕಲು ಸಜ್ಜಾಗಿರುವ ಸುದ್ದಿ ಕೆಲವು ದಿನಗಳ ಹಿಂದೆಯೇ ದೃಢಪಟ್ಟಿತ್ತು. ಪೂರಿ ಜಗನ್ನಾಥ ನಿರ್ದೇಶನದಲ್ಲಿ ‘ಫೈಟರ್’ ಆಗಿ ಬಿ–ಟೌನ್‌ನಲ್ಲಿ ದೂಳೆಬ್ಬಿಸಲು ವಿಜಯ್ ಉತ್ಸುಕರಾಗಿದ್ದಾರೆ.

ಬಾಲಿವುಡ್ ಪುರಪ್ರವೇಶದಲ್ಲಿ ದೇವರಕೊಂಡ ಜೊತೆ ಯಾರು ತೆರೆಯನ್ನು ಹಂಚಿಕೊಳ್ಳಲಿದ್ದಾರೆ ಎಂಬ ವಿಷಯ ಅಭಿಮಾನಿಗಳಲ್ಲಿ ಸಾಕಷ್ಟು ಕುತೂಹಲ ಹುಟ್ಟಿಸಿತ್ತು. ರೊಮ್ಯಾಂಟಿಕ್ ಲವ್ ಸ್ಟೋರಿಗೆ ಹೆಸರಾಗಿರುವ ಈ ನಟನ ಜೊತೆ ಜಾಹ್ನವಿ ಕಪೂರ್ ನಟಿಸಲಿದ್ದಾರೆ ಎಂಬ ಗಾಳಿಸುದ್ದಿಯೂ ಹಬ್ಬಿತ್ತು. ಆದರೆ ಇತ್ತೀಚೆಗೆ ಜಾಹೀರಾಗಿರುವ ಇನ್ನೊಂದು ಮೂಲದ ಪ್ರಕಾರ ಆ ಸುದ್ದಿ ಸುಳ್ಳು. ಹಾಗಾದರೆ ಫೈಟರ್‌ಗೆ ತೆರೆಯ ಮೇಲೆ ಪೈಪೋಟಿ ನೀಡುತ್ತಿರುವ ಜಾಣೆ ಯಾರು? ಆ ಅವಕಾಶ ಸಿಕ್ಕಿರುವುದು ಅನನ್ಯಾ ಪಾಂಡೆಗೆ ಎನ್ನುತ್ತಿದೆ ಬಿ ಟೌನ್ ಹರಟೆಕಟ್ಟೆ.

ಅನನ್ಯಾ ಪಾಂಡೆ ‘ಫೈಟರ್’ ಚಿತ್ರಕ್ಕೆ ನಾಯಕಿಯಾಗಿ ಆಯ್ಕೆಯಾಗಿದ್ದಾರಂತೆ. ಇದೇ ಮಾರ್ಚ್ ಕೊನೆಯ ವಾರ ಅಥವಾ ಏಪ್ರಿಲ್ ಮೊದಲ ವಾರದಲ್ಲಿ ಅವರು ಚಿತ್ರತಂಡವನ್ನು ಸೇರಿಕೊಳ್ಳಲಿದ್ದಾರಂತೆ. ತಮಗೆ ಸಿಕ್ಕಿರುವ ಈ ಅವಕಾಶದಿಂದ ಅನನ್ಯಾ ಕೂಡ ಪುಳಕಿತರಾಗಿದ್ದಾರಂತೆ. ‘ಅರ್ಜುನ್ ರೆಡ್ಡಿ’, ‘ಗೀತ ಗೋವಿಂದಂ’ ಸಿನಿಮಾಗಳಿಗೆ ಸಿಕ್ಕ ಭರ್ಜರಿ ಯಶಸ್ಸು ಈ ಚಿತ್ರಕ್ಕೂ ಸಿಗುತ್ತದೆ. ತಮ್ಮ ವೃತ್ತಿಬದುಕಿಗೆ ಹೊಸ ಬ್ರೇಕ್ ಸಿಗುತ್ತದೆ ಎಂಬ ಕನಸಿನಲ್ಲಿ



# ದಿಶಾ ಪಟಾನಿ ವೇಟ್‌ಲಿಫ್ಟಿಂಗ್

ದಿಶಾ ಪಟಾನಿ ಸಣ್ಣ ವಯಸ್ಸಿನಲ್ಲೇ ಬಾಲಿವುಡ್‌ನಲ್ಲಿ ದೊಡ್ಡ ಹೀರೊಗಳ ಜೊತೆಗೆ ನಟಿಸಿ ಸುದ್ದಿ ಮಾಡಿದಾಕೆ. ಬಳುಕುವ ದೇಹದ ಈ ಸುಂದರಿ ಟೈಗರ್ ಶ್ರಾಫ್ ಜೊತೆಗೆ ನಟಿಸಿದಾಗ ‘ಇದೊಂದು ಆಕರ್ಷಕ ಜೋಡಿ’ ಎಂದು ಪತ್ರಕರ್ತರು ಹೊಗಳಿದರು. ಒರಿಜಿನಲ್ ಸ್ಟಂಟ್‌ಗಳಿಗೆ ಹೆಸರಾದ ಟೈಗರ್ ಶ್ರಾಫ್‌ಗೆ ಸರಿಸಮನಾಗಿ ಸ್ಟಂಟ್ ದೃಶ್ಯಗಳಲ್ಲೂ ನಟಿಸಿದಾಕೆ ಈ ದಿಶಾ. ಆದರೆ ದಿಶಾ ತನಗಿಂತ ಎರಡು ಪಟ್ಟು ಹೆಚ್ಚು ವಯಸ್ಸಿನ ಸಲ್ಮಾನ್ ಖಾನ್ ಜೊತೆಗೆ ‘ಭಾರತ್’ನಲ್ಲಿ ನಟಿಸಿದಾಗ ಇಡೀ ಬಾಲಿವುಡ್ಡೇ ಅಚ್ಚರಿ ವ್ಯಕ್ತಪಡಿಸಿತ್ತು.

ಇದೀಗ ದಿಶಾಳ ಇನ್ನೊಂದು ಇನ್‌ಸ್ಟಾಗ್ರಾಮ್ ವಿಡಿಯೊ ನೋಡಿ ಬಾಲಿವುಡ್ ಅಚ್ಚರಿಯಿಂದ ಮೂಗಿನ ಮೇಲೆ ಬೆರಳಿಟ್ಟಿದೆ. ಬೆಳಿಗ್ಗೆದ್ದು ಜಿಮ್‌ಗೆ ಹೋಗುವ ದಿಶಾ, ಕಳೆದ ವಾರ ಅಲ್ಲಿ 60 ಕೆ.ಜಿ. ತೂಕವನ್ನು ಹೆಗಲ ಮೇಲಿಂದ ಲಿಫ್ಟ್ ಮಾಡಿ ಅಚ್ಚರಿ ಮೂಡಿಸಿದ್ದಾಳೆ. ಅದೂ ಬರೋಬ್ಬರಿ ಮೂರು ಸಲ ಈ ತೂಕವನ್ನು ಪವರ್‌ಲಿಫ್ಟ್ ಮಾಡಿದ್ದು ಆಕೆಯ ಫಿಟ್‌ನೆಸ್ ಬಗ್ಗೆ ಹೆಮ್ಮೆ ಮೂಡಿಸಿದೆ.

ಆದಿತ್ಯರಾಯ್ ಕಪೂರ್ ಮತ್ತು ಅನಿಲ್ ಕಪೂರ್ ಜೊತೆಗೆ ದಿಶಾ ನಟಿಸಿರುವ ‘ಮಲಾಂಗ್’ ಚಿತ್ರ ಬಾಕ್ಸ್‌ಆಫೀಸ್‌ನಲ್ಲಿ ಪರವಾಗಿಲ್ಲ ಎನ್ನುವಂತಹ ಗಳಿಕೆ ತೋರಿಸುತ್ತಿದೆ. ನೀರಿನಾಳದಲ್ಲಿ ಆದಿತ್ಯ ಜೊತೆಗೆ 10 ಗಂಟೆಗಳ ಕಾಲ ನಡೆಸಿದ ಶೂಟಿಂಗ್ ಬಗ್ಗೆಯೂ ದಿಶಾ ಹೆಮ್ಮೆಯಿಂದ ಮಾತನಾಡಿದ್ದಾಳೆ. ‘ನೀರಿನೊಳಗೆ ಮುಖದಲ್ಲಿ ಭಾವನೆಗಳನ್ನು ತೋರಿಸುವುದು ಕಷ್ಟದ ಕೆಲಸ. ಆದಿತ್ಯ ಮತ್ತು ನಾನು ಈ ದೃಶ್ಯದ ಸಲುವಾಗಿ ಎರಡುಮೂರು ದಿನ ತರಬೇತಿ ಪಡೆದಿದ್ದೆವು’ ಎಂದಿದ್ದಾಳೆ ದಿಶಾ.

ಈ ವರ್ಷ ಈದ್‌ಗೆ ಬಿಡುಗಡೆಯಾಗಲಿರುವ ಸಲ್ಮಾನ್ ಖಾನ್ ಮುಂದಿನ ಚಿತ್ರ ‘ರಾಧೇ’ಯಲ್ಲಿ ದಿಶಾ ನಾಯಕಿ. ಜೊತೆಗೆ ಏಕ್ತಾ ಕಪೂರ್ ನಿರ್ಮಾಣದ ಹೊಸ ಚಿತ್ರ ‘ಕೆಟೀನಾ’ದಲ್ಲೂ ನಟಿಸುತ್ತಿದ್ದಾಳೆ. 25ರ ಹರೆಯದ ಈ ಬರೇಲಿಯ ಸುಂದರಿ, 2013ರಲ್ಲಿ ‘ಮಿಸ್ ಇಂದೋರ್’ ಪ್ರಶಸ್ತಿ ಗೆದ್ದು ಮಾಡೆಲಿಂಗ್‌ನಲ್ಲಿ ಮಿಂಚಿದವಳು. ತೆಲುಗು ಚಿತ್ರ ‘ಲೋಫರ್’ ಮೂಲಕ ಚಿತ್ರರಂಗಕ್ಕೆ ಅಡಿಯಿಟ್ಟಳು. ಬಳಿಕ ಟೈಗರ್ ಶ್ರಾಫ್‌ನ ಸೂಪರ್‌ಹಿಟ್ ಚಿತ್ರ ‘ಭಾಗಿ 2’ನಲ್ಲಿ ಮಿಂಚಿದ್ದೇ ತಡ, ಬಾಲಿವುಡ್‌ನಲ್ಲಿ ಈಕೆಗೆ ಅವಕಾಶಗಳ ಹೆಬ್ಬಾಗಿಲು ತೆರೆದಿದೆ.